**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 38/2024**

| | | |
|---|---|---|
| ಹೆಸರು | ಹೆಚ್ ಎಂ ಮಹದೇವ | ಸಿ.ಡಬ್ಲ್ಯೂ 7 |
| ತಂದೆಯ ಹೆಸರು | ಮಾದಯ್ಯ | ಪಿ.ಡಬ್ಲ್ಯೂ 6 |
| ವಯಸ್ಸು | 45 ವರ್ಷ | |
| ಉದ್ಯೋಗ | ಪವರ್ ಹೌಸ್ ನಲ್ಲಿ ಕೆಲಸ | |
| ವಾಸ ಸ್ಥಳ | ಹೊಸಹೆಮ್ಮಿಗೆ ಗ್ರಾಮ | |

ಸಾಕ್ಷಿಗೆ ದಿನಾಂಕಃ 20.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ**

ಚಾ.ಸಾ. 1 ರಿಂದ 6, 8 ಮತ್ತು 9 ರವರ ಪರಿಚಯವಿದೆ. ಅಪಘಾತವಾದ ದಿನ 04.03.2024 ರಂದು ನಾನು ಮನೆಯಲ್ಲಿ ಇದ್ದಾಗ ಚಾಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ರವಿ ರವರಿಗೆ ಕೆ ಎಂ ದೊಡ್ಡಿ ಬಳಿ ಅಪಘಾತವಾಗಿದೆ ಎಂದು, ಕಾರು ಅಪಘಾತವಾಗಿದೆ ಎಂದು ರವಿ ರವರನ್ನು ಮಾದೇಗೌಡ ಅಸ್ಪತ್ರೆಗೆ ಸೇರಿಸಿದ್ದು, ಅವರ ಮನೆಗೆ ತಿಳಿಸುವಂತೆ ಹೇಳಿರುತ್ತಾರೆ. ನಾನು ರವಿ ರವರ ಕುಟುಂಬದವರಿಗೆ ಅಪಘಾತದ ವಿಚಾರವನ್ನು ಹೇಳಿರುತ್ತೇನೆ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿಸಲಾಯಿತು.**

**ವಾಟೀ ಸವಾಲುಃ ಎ ಪಿ ಪಿ ರವರಿಂದ ಃ**

ತಳಗವಾದಿ ಗ್ರಾಮದ ಬಳಿ ರವಿ ರವರು ದಿನಾಂಕ 03.03.2024 ರಂದು ವಾಹನದಿದ ಇಳಿದು ಹೋಗುತ್ತಿರುವಾಗ ಕೆಎ-52-ಎಂ-1720 ನಂಬರಿನ ಕಾರು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಂದು ರವಿ ರವರಿಗೆ ಡಿಕ್ಕಿಪಡಿಸಿರುತ್ತದೆ ಎಂದು ನನಗೆ ಚಾಸಾ-2 ರವರು ದೂರವಾಣಿ ಕರೆ ಮಾಡಿ ಹೇಳಿರುತ್ತಾರೆ ಎಂದರೆ ಸರಿ. ದಿನಾಂಕ 04.03.2024 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ

ಮೈಸೂರಿನ ಜೆ ಎಸ್ ಎಸ್ ಅಸ್ಪತ್ರೆಯಲ್ಲಿ ರವಿ ರವರು ಮೃತರಾಗಿರುವ ಬಗ್ಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಃಆರೋಪಿ ಪರ ವಕೀಲರಿಂದ**

ಚಾಸಾ-2 ನನ್ನ ಸಹಪಾಠಿ ಅಗಿದ್ದರು. ನಾನು 3 ಅಥವಾ 4 ನೇ ತಾರೀಖು ಹೇಳಿಕೆ ನೀಡಿರುತ್ತೇನೆ. ಮಳವಳ್ಳಿ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಹೇಳಿಕೆ ಪಡದ ಅದಿಕಾರಿಯ ಹೆಸರು ಗೊತ್ತಿರುವುದಿಲ್ಲ ನಾನು ಹೇಳಿಕೆ ಕೊಡದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೆ 6.45 ರಿಂದ 7.00 ಗಂಟೆ ಸಮಯದಲ್ಲಿ ನನಗೆ ಅಪಘಾತದ ಬಗ್ಗೆ ಮಾಹಿತಿ ಬಂದಿರುತ್ತದೆ. ನನಗೆ ಚಾಸಾ-2 ರವರು ಸ್ಪಷ್ಟವಾಗಿ ಅಪಘಾತದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಕೆ ಎಂ ದೊಡ್ಡಿ ಪಕ್ಕದಲ್ಲಿ ಅಪಘಾತವಾಗಿದೆ ಎಂದು ಹೇಳಿದ್ದು, ನಿಖರವಾದ ಸ್ಥಳ ಹೇಳಿರುವುದಿಲ್ಲ. ನನಗೆ ಅಪಘಾತದ ಸ್ಪಷ್ಟವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ2 ರವರು ನನಗೆ ಯಾವುದೇ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಕೆಎ-42/1720 ವಾಹನವು ಡಿಕ್ಕಿಪಡಿಸಿರುತ್ತದೆ ಎಂದು ಚಾಸಾ-2 ರಮರ ಹೇಳಿರುತ್ತಾರೆ. ಅಪಘಾತಪಡಿಸಿದ ವಾಹನ ಯಾವುದು ಎಂದು ಹೇಳಿರುವುದಿಲ್ಲ. ರವಿಯ ನಮ್ಮ ಗ್ರಾಮದವರಾಗಿರುತ್ತಾರೆ. ಮೃತನ ಕುಟುಂಬದವರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗೂ ಈ ಪ್ರಕರಣಕ್ಕೂ ಸಂಬಂದವಿಲ್ಲದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾದೇಗೌಡ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಚಾಸಾ-2 ರವರು ತಿಳಿಸಿದರು.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.